1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.68/2017

ದಿಃ 01.08.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Aw-1 Pw-19

| | | |
|---|---|---|
| ಹೆಸರು | ಃ | ಡಾ. ಜಗದೀಶ್ |
| ತಂದೆಯ ಹೆಸರು | ಃ | ಡಾ. ಎನ್ ಹೆಚ್ ಹಾಲಪ್ಪ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಪ್ರಾಧ್ಯಾಪಕರು,<br>ರಾಜರಾಜೇಶ್ವರಿ ಮೆಡಿಕಲ್ ಕಾಲೇಜು<br>ಮತ್ತು ಆಸ್ಪತ್ರೆ, ಬೆಂಗಳೂರು |
| ವಾಸಸ್ಥಳ | ಃ | ಬೆಂಗಳೂರು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 10 ವರ್ಷಗಳಿಂದ ನಾನು ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಬೇರೆ ಬೇರೆ ಹುದ್ದೆಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಡಾ. ನಿಸಾರ್ ಅಹಮದ್ ಅವರು ನಮ್ಮ ಆಸ್ಪತ್ರೆಯಲ್ಲಿ ದಿಃ01.09.2013ರಿಂದ ದಿಃ22.11.2019ರವರೆಗೆ ವೈದ್ಯರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ದಿಃ17.09.2021ರಂದು ವೈದ್ಯರಾದಂತಹ ನಿಸಾರ್ ಅಹಮದ್ ಅವರು ಮರಣ ಹೊಂದಿರುತ್ತಾರೆ. ನಾನು ಅವರ ಜೊತೆ 2014ರಿಂದ 2019ರವರೆಗೆ ನಾನು ವೈದ್ಯರಾದಂತಹ ನಿಸಾರ್ ಅಹಮದ್ ಅವರ ಜೊತೆ ಕೆಲಸ ಮಾಡಿರುತ್ತೇನೆ. ಆ ಕಾರಣ ನನಗೆ ವೈದ್ಯರಾದಂತಹ ನಿಸಾರ್ ಅಹಮದ್ ಅವರ ಸಹಿಯ ಪರಿಚಯ ಇದೆ. ಈಗ ನನಗೆ ತೋರಿಸಿದಂತಹ ದಿಃ03.03.2017ರ ಶವಪರೀಕ್ಷಾ ವರದಿಯಲ್ಲಿ

ಇರುವಂತಹ ಸಹಿ ಡಾ. ನಿಸಾರ್ ಅಹಮದ್ ಅವರದ್ದಾಗಿರುತ್ತದೆ. ಸಾಕ್ಷಿಯು ವೈದ್ಯರ ಸಹಿಯನ್ನು ಗುರುತಿಸಿರುವ ಕಾರಣ ಸದರಿ ಶವಪರೀಕ್ಷಾ ವರದಿಯನ್ನು ನಿ.ಪಿ.19 ಹಾಗೂ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ದಿಃ17.04.2017ರ ಮಾಗಡಿ ವೃತ್ತ ನಿರೀಕ್ಷಕರಿಗೆ ನಮ್ಮ ಆಸ್ಪತ್ರೆಯಿಂದ ನೀಡಿರುವಂತಹ ಪತ್ರವನ್ನು ಈಗ ನೋಡುತ್ತಿದ್ದು, ಅದರಲ್ಲಿ ಇರುವಂತಹ ಸಹಿ ಸಹ ಡಾ. ನಿಸಾರ್ ಅಹಮದ್ ಅವರದ್ದಾಗಿರುತ್ತದೆ. ವೈದ್ಯರ ಅಭಿಪ್ರಾಯದ ವರದಿಯ ಸದರಿ ಪತ್ರವನ್ನು ನಿ.ಪಿ.20 ಹಾಗೂ ಸಾಕ್ಷಿ ಗುರುತಿಸಿರುವ ಸಹಿಯನ್ನು ನಿ.ಪಿ.20(ಎ) ಎಂದು ಗುರುತಿಸಲಾಯಿತು. ಶವಪರೀಕ್ಷೆ ನಡೆಸಿದ ನಂತರ ವೈದ್ಯರು ನಿ.ಪಿ.19ರಂತಹ ವರದಿಯನ್ನು ನೀಡುತ್ತಾರೆ. ನಿ.ಪಿ.20ನ್ನು ವೈದ್ಯರ ಮುಂದುವರಿದ ಅಭಿಪ್ರಾಯ ನೀಡುವಂತೆ ಕೋರಿಕೆ ಬಂದಂತಹ ಸಮಯದಲ್ಲಿ ನೀಡಲಾಗಿದೆ.

<u>ಪಾಟೀ ಸವಾಲುಃ ಶ್ರೀ. ಎಂ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.